ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 18.07.2025.

**ಪಾಟೀ ಸವಾಲು – ವಾದಿ ಪರಃ ವಕೀಲರಿಂದಃ**

ನನಗೆ ಓದಲು ಬರೆಯಲು ಬರುತ್ತದೆ. ಈ ದಾವೆಯನ್ನು ಯಾರು ಯಾರ ಮೇಲೆ ಹಾಕಿದ್ದಾರೆ ಅಂತಾ ನನಗೆ ಗೊತ್ತಿದೆ. ಈ ದಾವೆಯನ್ನು ರೇವಣೆಪ್ಪ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಕವಿತಾ ತನ್ನ ತಂದೆಯ ಆಸ್ತಿಯ ಮೇಲೆ ಹಿಸ್ಸೆ ಕೇಳಿ ದಾಖಲಿಸಿದ್ದಾಳೆ ಅಂದರೆ ಸರಿ. ನನ್ನ ತಂದೆಯ ಹೆಸರು ನಿಂಗಪ್ಪ ಮಲ್ಲಪ್ಪ ಒಡೆಯನಪುರ. ನನ್ನ ತಾಯಿಯ ಹೆಸರು ಬಸಮ್ಮ ಅಂತಾ ಇರುತ್ತದೆ. ಮಲ್ಲಪ್ಪ ಮತ್ತು ಬಸಮ್ಮ ಇವರಿಗೆ 6 ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಅವರ ಹೆಸರು ಮಲ್ಲಿಕಾರ್ಜುನ, ಪುಟ್ಟಪ್ಪ, ದ್ಯಾಮಜ್ಜಪ್ಪ, ಕೆಂಚಪ್ಪ, ರೇವಣೆಪ್ಪ, ಈರಪ್ಪ, ಅಕ್ಕಮ್ಮ ಮತ್ತು ಬಸಮ್ಮ ಅಂತಾ ಇರುತ್ತದೆ. ಕವಿತಾಳ ತಂದೆ ರೇವಣೆಪ್ಪ ಅಂದರೆ ಸರಿ. ರೇವಣೆಪ್ಪ ಈತನಿಗೆ ಇಬ್ಬರೂ ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಇರುತ್ತಾಳೆ. ಅವರ ಮಕ್ಕಳ ಹೆಸರು ಶಿವರಾಜ, ಮಂಜುನಾಥ ಮತ್ತು ಕವಿತಾ ಅಂತಾ ಇರುತ್ತದೆ. ರೇವಣೆಪ್ಪನ ಹೆಂಡತಿಯ ಹೆಸರು ಸಾಕಮ್ಮ ಅಂತಾ ಇರುತ್ತದೆ ಅವಳು ಮರಣ ಹೊಂದಿರುತ್ತಾಳೆ. ನಮ್ಮ ಊರು ಶಿಡೇನೂರಿನಲ್ಲಿ 7 ಎಕರೆ 31 ಗುಂಟೆ ನಮ್ಮ ತಂದೆಯ ಹೆಸರಿಗೆ ಇತ್ತು. ನಮ್ಮ ತಂದೆ ಮರಣ ಹೊಂದಿದ ಮೇಲೆ ಮಲ್ಲಿಕಾರ್ಜುನ ನಿಂಗಪ್ಪ ಒಡೆಯನಪುರ ಇವರ ಹೆಸರಿಗೆ ಬಂದಿರುತ್ತದೆ. ಸದರಿ ಆಸ್ತಿ ಬಿಟ್ಟು ಬೇರೆ ಆಸ್ತಿ ಇರುವುದಿಲ್ಲಾ ಆದರೆ ಮನೆ ಆಸ್ತಿ ಇರುತ್ತದೆ. 2 ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ. ಮಲ್ಲಿಕಾರ್ಜುನ ಈತನ ಹೆಸರಿಗೆ ಇದ್ದ ಆಸ್ತಿಯನ್ನು ಆಫಸಾತಿಯಲ್ಲಿ ಬೇರೆ ಮಾಡಿಕೊಂಡಿರುತ್ತವೆ. ನಂತರ ಸಾಲ

ತೀರಿದ ನಂತರ ಅವರವರ ಹೆಸರಿಗೆ ಬೇರೆ ಬೇರೆ ಮಾಡಿಕೊಂಡಿರುತ್ತಾರೆ. ಸದರಿ ಆಪಸಾತ ನೋಂದಣಿಯನ್ನು 2013-14 ರಲ್ಲಿ ಮಾಡಿರುತ್ತೇವೆ. ಆ ಸಮಯದಲ್ಲಿ ಎಲ್ಲರಿಗೂ ಹಿಸ್ಸೆ ಬಂದಿದೆ ಅಂದರೆ ಸರಿ. ರಿ ಸಾ ನಂಬರ 66/1 ಸಿ ದಲ್ಲಿ 4 ಜನರಿಗೆ 31 ಗುಂಟೆ ತಲಾ ಮತ್ತು ಉಳಿದವರಿಗೆ 33 ಗುಂಟೆ ತಲಾ ಬಂದಿರುತ್ತದೆ. 2013-14 ರಲ್ಲಿ 1 ನೇ ಪ್ರತಿವಾದಿಗೆ ರಿ ಸಾ ನಂಬರ 66/6 ರಲ್ಲಿ 33 ಗುಂಟೆ ಆಸ್ತಿ ಬಂತು ಎಂದರೆ ಸರಿ. ಸದರಿ ದಾವಾ ಆಸ್ತಿ ವಾದಿ ಮತ್ತು ಪ್ರತಿವಾದಿಯರ ಕಬ್ಜಾ ವಹಿವಾಟಿನಲ್ಲಿ ಇದೆ ಎಂದರೆ ಸಾಕ್ಷಿಯು ನನ್ನ ಕಬ್ಜಾ ವಹಿವಾಟಿನಲ್ಲಿ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ವಾದಿ ಮತ್ತು ಪ್ರತಿವಾದಿಯ ಕಬ್ಜೆಯಲ್ಲಿ ಇರಬೇಕು ಎಂದರೆ ಸಾಕ್ಷಿಯು ನನಗೆ ಖರೀದಿ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-01 ಇದು 1 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ. ನಿಪಿ-02 ಇದು 1 ನೇ ಪ್ರತಿವಾದಿಯ ಹೆಸರಿಗೆ ಇದ್ದು ಅದನ್ನು ನನಗೆ ಖರೀದಿ ಕೊಟ್ಟಿರುತ್ತಾನೆ. ನಾನು ಖರೀದಿ ಪಡೆದ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ ಕಾರಣ ಊರ ಹಿರಿಯರು ಸೇರಿ ಬೇರೆಯವರಿಗೆ ಹೊಂದುವುದಿಲ್ಲಾ ನಿನಗೆ ಹೊಂದುತ್ತದೆ ಎಂದು ಖರೀದಿ ಕೊಡಿಸಿರುತ್ತಾರೆ. ರೇವಣ್ಣೆಪ್ಪ ಒಬ್ಬನೇ ಖರೀದಿ ಕೊಟ್ಟಿದ್ದು ಆತನ ಮಕ್ಕಳು ಆ ಸಮಯದಲ್ಲಿ ಜನಿಸಿರುತ್ತಾರೆ. 1 ನೇ ಪ್ರತಿವಾದಿ ನಮಗೆ ಖರೀದಿ ಕೊಟ್ಟ ಬಗ್ಗೆ ಆತನ ಮಕ್ಕಳಿಗೆ ಗೊತ್ತಿರುತ್ತದೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. 1 ನೇ ಪ್ರತಿವಾದಿ ತನ್ನ ಹೆಸರಿಗೆ ಇದ್ದ ಜಮೀನಿನ ಬೆಳೆ ವಿಮೆ ಮತ್ತು ಸರ್ಕಾರಿ ಸೌಲಭ್ಯ ಈಗಲು ಅವನೆ ತೆಗೆದುಕೊಳ್ಳುತ್ತಾನೆ ಅಂದರೆ ಸರಿ.

ವಾದಿಯನ್ನು ಗುಮ್ಮನಹಳ್ಳಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಗುಮ್ಮನಹಳ್ಳಿ ನಮ್ಮ

ಊರಿನಿಂದ 5 ಕಿ.ಮಿ. ಇರುತ್ತದೆ. ನಮ್ಮ ಜಮೀನು ಗುಮ್ಮನಹಳ್ಳಿಗೆ ಸಮೀಪ ಇದೆ ಎಂದರೆ ಸರಿಯಲ್ಲಾ. ವಾದಿಯು ದಾವಾ ಆಸ್ತಿಯನ್ನು ತನ್ನ ಊರಿನಿಂದ ಬಂದು ಮಾಡುತ್ತಾ ಹೋಗುತ್ತಾಳೆ ಮತ್ತು ಕಬ್ಜಾ ಇದ್ದಾಳೆ ಅಂದರೆ ಸರಿ. ವಾದಿಯ ತಂದೆ ಕೆಲಸ ಇದ್ದಾಗ ಬಂದು ಮಾಡಿ ಮತ್ತೆ ಊರಿಗೆ ಹೋಗುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿ ನನಗೆ ಖರೀದಿ ಕೊಟ್ಟಿದ್ದಾನೆ ಅಂತಾ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಆದೇಶಿಸಿ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

Sd/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.